

ಜೆ.ಎಂ.ಎಸ್. ಮಣಿ ಅವರ ಬಾದಾಮಿ ಸರಣಿಯ ಒಂದು ಕಲಾಕೃತಿ

ಸುಬ್ಬರಾವ್ ಅವರ ಉದಾಹರಣೆಯೂ ಇದ್ದಿತು. ಜತೆಗೆ ಎನ್. ಮರಿಶಾಮಾಚಾರ್, ಚಂದ್ರನಾಥ್, ಕೆ.ಟಿ. ಶಿವಪ್ರಸಾದ್, ಅ.ಲ. ನರಸಿಂಹನ್, ರಾಮದಾಸ್, ಪ.ಸ. ಕುಮಾರ್, ಸಿ. ಚಂದ್ರಶೇಖರ್, ಬಿ. ಜಯರಾಮ್, ಚಿ.ಸು. ಕೃಷ್ಣಸೆಟ್ಟಿ ಮೊದಲಾದ ಗೆಳೆಯರ ಸಮೂಹ. ಕಲೆಯ ಮೊದಲ ಪಾಠದಂತಹ 'ನಕಲು' ಮಾಡುವಿಕೆ, ಅನಂತರ ಅದಕ್ಕೆ ಕಲಾತ್ಮಕತೆ ಮತ್ತು ಸೃಜನಶೀಲತೆಗಳನ್ನು ಲೇಪಿಸುವಿಕೆಯ ನಿರಂತರ, ಶ್ರಮಸಹಿಷ್ಣು ಅಭ್ಯಾಸದ ಆಶ್ರಯವು ಬದುಕುವ ದಾರಿಗಳನ್ನು ತೋರುತ್ತದೆ, ಎಂಬುದನ್ನು ಮಣಿ ಮನಗಂಡಿದ್ದರು.

ಬಹುಶಃ ಹಡಪದ್ ಅವರ ಕಣ್ಣಿಗೆ ಬೀಳದೆ, ಅವರು ಆಸಕ್ತಿ ತೋರಿಸದೆ, ಆಶ್ರಯವನ್ನು ನೀಡದೆ ಇದ್ದಿದ್ದರೆ, ಮಣಿಯವರೇ ನಮ್ಮ ನಡುವೆ ಆಗಾಗ ಹೇಳಿಕೊಳ್ಳುತ್ತಿದ್ದಂತೆ 'ಪರ್ಮನೆಂಟ್ ಆಗಿ ಶ್ರೀರಾಮಪುರದ ರೌಡಿಯಾಗಿ' ರೂಪುಗೊಂಡು ಪ್ರತಿಷ್ಠಾಪನೆಗೊಳ್ಳುತ್ತಿದ್ದರು! ಆದರೂ ಬೆಂಗಳೂರಿನ ಕಲಾರಂಗದಲ್ಲಿ ಮೇಲ್ನೋಟಕ್ಕಷ್ಟೇ ರೌಡಿಸಂ ಕಾಣಿಸಿಕೊಳ್ಳಲಿಲ್ಲ ಎಂಬುದು ಅವರ ಆಪ್ತವಲಯಕ್ಕಷ್ಟೇ ಗೊತ್ತು. ಆದರೆ, ಮಣಿ ಅಪರೂಪದ ಕಲಾವಿದರಾಗಿ ರೂಪುಗೊಂಡ ಸಂದರ್ಭವನ್ನು ವಾಲ್ಮೀಕಿ ರಾಮಾಯಣ ಬರೆದ ಸಂದರ್ಭದೊಂದಿಗೆ ಹೋಲಿಸಬಹುದೇನೊ!

ನಮ್ಮ ನಡುವೆ ಅಪೂರ್ವ ಕಲಾವಿದರಾಗಿ ರೂಪುಗೊಂಡದ್ದು, ಅವರದೇ ಆದ ಅಸ್ಮಿತೆಯನ್ನು ಸಾಧಿಸಿದ್ದು, ಗ್ಯಾಲರಿ ಪೋಷಕ ರಾಜಕಾರಣವನ್ನು ಮೀರಿ, ಪ್ರತಿಷ್ಠಿತ ಹಿರಿಯ ಕಲಾವಿದರ ನಡುವೆಯೂ ಇದೊಂದು ಅಪೂರ್ವ ಸಂದರ್ಭವೊಂದರ ಸೃಷ್ಟಿಯೇ ಸರಿ. ಹೀಗಾಗಿಯೇ ಬೆಂಗಳೂರಿನ ಪ್ರಮುಖ ಗ್ಯಾಲರಿಯೊಂದು ಅಂದಿನ ಖ್ಯಾತನಾಮರ ಚಿತ್ರಕೃತಿಗಳನ್ನು ಒಮ್ಮೆ ಸಿಂಗಪುರದಲ್ಲಿ ಪ್ರದರ್ಶಿಸಿದಾಗ, ಎಲ್ಲರ ಕೃತಿಗಳನ್ನು ಹಿಂದಿಕ್ಕಿ ಮಣಿಯವರ ಎಲ್ಲ ಕೃತಿಗಳು ಕೊಳ್ಳಲ್ಪಟ್ಟವು!

ಆದಿಮ, ದ್ರಾವಿಡ ಸಂಸ್ಕೃತಿ ಮೂಲದ ಒರಟುತನವನ್ನು ಮಣಿ ತಮ್ಮ ಕಲಾಅಭಿವ್ಯಕ್ತಿಗಳಲ್ಲಿಯೇ ಅಲ್ಲದೆ ವ್ಯಕ್ತಿತ್ವದಲ್ಲಿಯೂ ಅರಗಿಸಿಕೊಂಡಿದ್ದರು. 'ಕಲೆ' ಮತ್ತು 'ನೈತಿಕತೆ'ಗಳ ಸಂಬಂಧವು ಪರಸ್ಪರವಾಗುವ ಅಗತ್ಯ ಇಲ್ಲವಾದರೂ ಹಾಗಾದರೆ ಉತ್ತಮ. ಹಲವು ನೆಲೆಗಳ ಅಭಿವ್ಯಕ್ತಿ ಪ್ರಕ್ರಿಯೆಯಲ್ಲಿ ತೊಡಗಿಕೊಂಡಿದ್ದ ಮಣಿ, ಈ ಸೃಷ್ಟಿಶೀಲತೆಯ ಆತ್ಯಂತಿಕ ಹಂತದಂತೆ ಗುರು ಹಡಪದ್ ಅವರ ಬಾದಾಮಿಯ ಜನಮಾನಸದ ಕಲಾಕೃತಿಗಳನ್ನು ಮಹತ್ವಾಕಾಂಕ್ಷೆಯಿಂದ ಚಿತ್ರಿಸಿದರು.